## ಹಸೀನಾಳ ಸಮಜಾಯಿಷಿ

ಠಾಣೆಯಲ್ಲಿ ಕುರ್ಚಿ ಮೇಲೆ ಆಸೀನನಾಗಿದ್ದೆ. ಮುಂದೆ ಐದಾರು ಅಡಿ ನೇರಕ್ಕೆ ಹಸೀನಾ! ನೆಲದ ಮೇಲೇ ಮುದುಡಿಕೊಂಡು ಕುಂತಿದ್ದಳು. ಗಾಢನಿದ್ದೆಯಲ್ಲಿ ಮಗನನ್ನ ತಬ್ಬಿ ಮಲಗಿದ್ದವಳನ್ನು ಮಹಿಳಾ ಸಿಬ್ಬಂದಿಗಳು ಎಬ್ಬಿಸಿ ಜೀಪು ಹತ್ತಿಸಿದ್ದರು. ತಾಯಿಯನ್ನು ಬಿಟ್ಟಿರಲಾರದೆ ಮಗನೂ ಜೊತೆಗೆ ಬಂದಿದ್ದ. ಇಸುಬು ಅಂತೆ ಅವನ ಹೆಸರು. ಮನೇಲಿದ್ದ ಎರಡನೇ ಗಂಡ ಗಾಬರಿ ಬಿದ್ದು ಹಿಂದೆಯೇ ಬಂದಿದ್ದ. 'ಏನಿಲ್ಲ ಮಾರಾಯಾ... ಸಣ್ ಎನ್‌ಕ್ವಯರಿ ಅಷ್ಟೆ, ಇಂಥಾ ಸ್ಟೇಷನ್ನಿಗೆ ಕರ್ಕೊಂಡು ಹೋಗ್ತಾ ಇದೀನಿ... ತನಿಖೆಗೆ ಈಕೆ ಸಹಕರಿಸಬೇಕಾಗ್ತದೆ. ಬೇಕಾದ್ರೆ ನೀನೂ ನಿನ್ ಗಾಡೀಲಿ ಬಾ... ಅವ್ರಿಗೆ ಏನೂ ತೊಂದರೆ ಇಲ್ಲ' ಅಂತ ಹಿಂದೀಲಿ ಭರವಸೆ ಕೊಟ್ಟಿದ್ದೆ. ನಿಟ್ಟುಸಿರು ಬಿಟ್ಟು ಸುಮ್ಮನಾಗಿದ್ದ.

'ನಿನ್ನ ಯಾಕೆ ಕರ್ಕೊಂಡುಬಂದದ್ದು ಗೊತ್ತಾ, ಹಸೀನಾ?' ಕೇಳಿದೆ. ನಿದ್ದೆಯಿಂದೆದ್ದಂತೆ ಒಮ್ಮೆ 'ಹ್ಞಾ' ಅಂದಳು. 'ಅದೇ ಆ ಮಗೀ ಸಲುವಾಗಿ ಇರ್ಬೋದು ಅಲ್ವಾ ಸಾ?...'

ಪರ್ವಾಗಿಲ್ಲ, ಪೊಲೀಸರು ಕರೆದೊಯ್ಯುತ್ತಿದ್ದಾರೆ ಅಂದ ತಕ್ಷಣ ಬಹುತೇಕ ಎಲ್ಲರೂ ಯಾಕೆ, ಏನು, ನಾನೇನು ಮಾಡಿದ್ದೀನಿ, ತಪ್ ಹೆಂಗಾಗ್ತದೆ? ಇತ್ಯಾದಿ ಕ್ವಶ್ಚನ್ನುಗಳನ್ನು ಕೇಳಿ ಖಚಿತಪಡಿಸಿಕೊಳ್ಳುತ್ತಾರೆ. ಇವಳು ಹಾಗಿಲ್ಲ, ನೇರ ಮಾತಿನವಳು.

'ಸರಿ ಹೇಳು... ಚಾಕ್ಲೇಟು ಚೀಪ್ಕೊಂಡು ನಿಂತಿದ್ದ ಮಗಾನ ನೀನು, ನಿನ್ ಮಗ ಸೇರಿ ಎತ್ಕೊಂಡು ಹೋದ್ರಲ್ಲಾ?... ಅವ್ರ ಅಪ್ಪ ಅಮ್ಮನಿಗೆ ಏನಾಗಿರ್ಬೇಡ?...' ಕೇಳಿದೆ.

'ಸಾ, ತಪ್ ತಿಳಿಯಂಗಿಲ್ಲ ಅಂದ್ರೆ ಒಂದ್ ಮಾತು ಹೇಳ್ಲಾ?...' ವಾದ ಆರಂಭಿಸುವ ವಕೀಲೆಯಂತಿತ್ತು ಅವಳ ಶೈಲಿ. ಸುಮ್ಮನೆ ಕತ್ತು ಆಡಿಸಿದೆ.

'ನನ್ನ ಮಗನಿಗೆ ಒಂದು ತಂಗಿ ಬೇಕಿತ್ತು ಅಷ್ಟೇ ಸಾ... ಸರಿ ತಪ್ಪು ನಾನು ಯೋಚ್ನೆ ಮಾಡ್ಲಿಲ್ಲ. ನಿದ್ದೇಲೂ ಅಮ್ಮೀ ನಂಗೊಂದು ಬೆಹನ್ ಬೇಕು ಅಮ್ಮೀ, ಅಂತ ಕನವರಿಸೋನು. ಎಲ್ಡು ಮಕ್ಳಾಗುತ್ತಿದ್ದಂತೆ ಆಪ್ರೇಸನ್ನು ಮಾಡಿಸ್ಕಂಡೋಳು ನಾನು. ಇವನಿಗೆ ಹೆಣ್ಣ್ ಮಗಾ ಹೆಂಗೆ ಹೆತ್ತುಕೊಡ್ಲಿ? ಅವ್ನು ಕೇಳ್ತಾ ಇದ್ರೆ ಕರುಳು ಕಿವುಚ್ದಂಗಾಗೋದು. ಆಸೆ ನಂಗೂ ಇತ್ತು, ಒಂದು ಹೆಣ್ ಮಗೀನ ತಾಯಿಯಾಗ್ಬೇಕು, ಪ್ರೀತಿಲಿ ಸಾಕ್ಬೇಕು ಅಂತ. ನಿದ್ದೇಲೂ ಅಷ್ಟೆ, ಆ ಮಗೀಗೆ ಸ್ನಾನ ಮಾಡಿಸ್ದಂಗೆ, ಜಡೆ ಹಾಕ್ದಂಗೆ, ಪೌಡ್ರು ಹಾಕಿ ಹೊಸಾ ಬಟ್ಟೆ ತೊಡುಸ್ದಂಗೆ ಕನಸು ಬೀಳ್ತಿತ್ತು. ಎಲ್ಲಾ ನನ್ ಮಗನ ಹತ್ರ ಹೇಳ್ಕತಿದ್ದೆ. ಎಲ್ಲಾರ ಒಂದು ತಂಗೀನ ತಗಂಬರಾನ ಬಾ ಅಮ್ಮೀ ಅನ್ನೋನು. ಮಗನ ಆಸೆ ಅದುಮಕ್ಕೆ ಮನ್ಸು ಬರ್ಲಿಲ್ಲ ಸಾ...' ಮಾತು ನಿಂತಿತು. ಕಣ್ಣುಗಳಿಂದ ನೀರುಕ್ಕಿತು. ಥಟ್ಟನೆ ಸೆರಗಿನಿಂದ ಒತ್ತಿಕೊಂಡಳು.

'ಇದೇ ಏರಿಯಾದಾಗೆ ನನ್ನ ಫ್ರೆಂಡ್ ಒಬ್ಳು ಇದ್ಳು, ಆಫ್ರೀನ್ ಅಂತ. ಅವ್ಳಿಗೂ ಹೇಳಿದ್ದೆ, ಯಾರ್ದಾದ್ರೂ ಬಡವ್ರ ಮನೆ ಹೆಣ್ಣು ಕೂಸು ಇದ್ದರೆ ಹೇಳು ಸಾಕ್ಕೋತೀನಿ ಅಂತಾ... ನೋಡ್ತೀನಿ ಅಂದಿದ್ಲು. ಮಗನ್ನ ಎಷ್ಟು ದಿನಾ ಸುಮ್ನೆ ಮಾಡ್ಲೀ ಸಾ? ಅವತ್ತೂವೆ ಆಫ್ರೀನ್ ನೋಡಕ್ಕೆ ಬಂದಿದ್ದೆ. ವಾಪಸು ಹೋಗುವಾಗ ಮಗಾ ಚಾಕ್ಲೇಟು ತಿನ್ಕೊತಾ ನಿಂತಿತ್ತು. ಮುಖದಾಗೆ ಪಳಪಳಾ ಹೊಳೆಯೋ ಕಣ್ಣುಗಳು. ತಡಿಯಕ್ಕಾಗ್ಲಿಲ್ಲ ಸಾ... ಕೊಳೆ ಬಟ್ಟೆ ಬೇರೆ ಹಾಕ್ಕಂಡಿತ್ತಲ್ಲ? ಯಾರೋ ಬಡವ್ರ ಮನೆ ಕೂಸು ಇರ್ಬೇಕು ಬುಡು, ಅಲ್ಲಾನೇ ದಾರಿ ತೋರ್ಸವ್ನೆ ಅಂತಾ ಧೈರ್ಯ ಮಾಡ್ಬುಟ್ಟೆ...' ಕುಡಿಯಲು ನೀರು ಬೇಕು ಅಂತ ಕೈಯೆತ್ತಿ ತೋರಿಸಿದಳು ಹಸೀನಾ.

'ಇಸುಬು ಯೋಚ್ನೇನೆ ಮಾಡ್ಲಿಲ್ಲ. ನನ್ ಮನ್ಸು ಅವ್ನಿಗೆ ಹೆಂಗ್ ತಿಳೀತೋ... ಕಂಕ್ಳಾಗೆ